(ಉ) ಪುರಸಭೆ ಮತ್ತು ನಗರ ಸಭೆ ಚುನಾವಣೆಗಳ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಛೇರ್ಮನ್‌ರವರೆ, ಈ ಸದನ ನಾಳೆದಿವಸ ಮುಕ್ತಾಯವಾಗುತ್ತಿದೆ. ಸ್ಥಳೀಯ ಸಂಸ್ಥೆಗಳಾದ ಪುರಸಭೆ ಮತ್ತು ನಗರಸಭೆಗಳ ಚುನಾವಣೆ ಈಗಾಗಲೇ ಘೋಷಣೆಯಾಗಿದೆ. ಹೈಕೋರ್ಟಿನ ಆದೇಶದ ಹಿನ್ನೆಲೆಯಲ್ಲಿ ಈಗ ಚುನಾವಣೆ ನಡೆಯುವಂಥದು ಗ್ಯಾರಂಟಿಯಾಗಿದೆ. ಸದರಿ ಚುನಾವಣೆಗಳ ಬಗ್ಗೆ ಪ್ರಸ್ತಾಪಮಾಡುವುದಕ್ಕಾಗಿ ಇವತ್ತು ಬೆಳಿಗ್ಗೆ ತಮಗೆ ನೋಟೀಸ್ ಕೊಟ್ಟಿದ್ದೇನೆ. ಇದನ್ನು ತಾವು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೀರಿ. ಈ ಚುನಾವಣೆಗಳ ವಿಷಯ ಈಗಾಗಲೇ ಅನೇಕ ಮಾಧ್ಯಮಗಳಲ್ಲಿ ಬರುತ್ತಿದೆ. ಈಗ ಇರತಕ್ಕಂಥ ನೋಟಿಫಿಕೇಷನ್ ಪ್ರಕಾರವೇ ಚುನಾವಣೆಗಳನ್ನು ನಡೆಸುತ್ತೀರಾ ಅಥವಾ ನೋಟಿಫಿಕೇಷನ್ ಹೊರತಾಗಿ ಶಾಸಕರು ಹೇಳಿದ ಹಾಗೆ ಕ್ಷೇತ್ರದಲ್ಲಿರತಕ್ಕಂಥ ಮಿಸಲಾತಿಯನ್ನು ಮತ್ತೆ ಬದಲಾವಣೆ ಮಾಡುತ್ತೀರಾ? ಏಕೆಂದರೆ, ನಾವು ಹೇಳಿದರೆ ಮೀಸಲಾತಿ ಬದಲಾವಣೆ ಮಾಡುತ್ತಾರೆಂದು ಈಗಾಗಲೇ ಅನೇಕರು ನಮಗೆ ದೂರವಾಣಿಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಏಕೆಂದರೆ ಚುನಾವಣೆ ಬಂದು ಹೋಗತಕ್ಕಂಥ ಜಾತ್ರೆ ಅಲ್ಲ. ಪ್ರಜಾತಂತ್ರ ವ್ಯವಸ್ಥೆಯ ಆಧಾರದ ಮೇಲೆ ನಡೆಯತಕ್ಕಂಥದ್ದು. ಆದ್ದರಿಂದ ಈ ಚುನಾವಣೆಯನ್ನು ಯಾವ ಆಧಾರದ ಮೇಲೆ ನಡೆಯುತ್ತದೆ? ಈಗಾಗಲೇ ಕ್ಷೇತ್ರವನ್ನು ನಿಗದಿ ಮಾಡಿ ಕೋರ್ಟ್‌ಗೆ ಕೊಟ್ಟಿರತಕ್ಕಂಥ ನೋಟಿಫಿಕೇಷನ್ ಪ್ರಕಾರವೇ ಅಥವಾ ಕ್ಷೇತ್ರಗಳ ಮೀಸಲಾತಿ ಮಾಡದೆ ಏನಾದರೂ ಬದಲಾವಣೆ ಮಾಡತಕ್ಕಂಥದಕ್ಕೆ ಸರ್ಕಾರ ಬದ್ಧವಾಗಿದೆಯೋ ಎಂಬುದರ ಬಗ್ಗೆ ಇಲ್ಲಿ ಸ್ಪಷ್ಟಪಡಿಸಬೇಕು. ಈಗಾಗಲೇ ಆಡಳಿತ ಪಕ್ಷದ ಶಾಸಕರು ಇದು ಸರಿ ಇಲ್ಲವೆಂದು ಅತೃಪ್ತಿ ವ್ಯಕ್ತಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಹಾಗಾಗಿ ಶಾಸಕರನ್ನು ಕೇಳಿ ಮತ್ತೆ ಬದಲಾವಣೆ ಮಾಡತಕ್ಕಂಥದ್ದು ಸರ್ಕಾರದ ಗಮನದಲ್ಲಿ ಇದೆಯೇ ಎಂಬುದನ್ನು ದಯವಿಟ್ಟು ಚುನಾವಣೆಯ ಹಿನ್ನೆಲೆಯಲ್ಲಿ ಈ ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಾಳೆದಿವಸ ಈ ವಿಷಯವನ್ನು ನಾವು ಎಲ್ಲಿಯೂ ಸಹ ಕೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದ ನೀತಿ ಏನು ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ನಗರಾಭಿವೃದ್ಧಿ ರಾಜ್ಯ ಸಚಿವರು) : ಮಾನ್ಯ ಛೇರ್ಮನರವರೆ, ಮಾನ್ಯ ಅರಗ ಜ್ಞಾನೇಂದ್ರರವರು ಕೇಳಿದಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಸವಿಸ್ತಾರವಾದ ಉತ್ತರವನ್ನು ನಾಳೆದಿವಸ ಸದನದ ಮುಂದೆ ಮಂಡಿಸುತ್ತೇನೆ.

ಛೇರ್ಮನ್ : ಈಗ 45 ನಿಮಿಷದಲ್ಲಿ ಏಳು ವಿಷಯಗಳು ಶೂನ್ಯವೇಳೆಯಲ್ಲಿ ಪ್ರಸ್ತಾಪ ಆಗಿದೆ. ಆದ್ದರಿಂದ ಅರ್ಜಿಗಳನ್ನು ಒಪ್ಪಿಸಿದ ಮೇಲೆ ಆರು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಛೇರ್ಮನ್‌ರವರೆ, ಬಹಳ ಪ್ರಮುಖವಾದಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಐದು ನಿಮಿಷಗಳ ಕಾಲ ಅವಕಾಶ ಕೊಡಿ.